ಸಮಾಜದ ಅವಮಾನ, ನೋವು–ಬವಣೆಗಳಿಗೆ ಪ್ರತೀಕನಾದವ.

ವೃತ್ತಿ ನಿರತನಾಗಿದ್ದ ತಮ್ಮು ಎದುರಿಸಿದ ಸಮಸ್ಯೆ ಒಂದೇ, ಎರಡೇ? ಕ್ಷೌರಕ್ಕೆಂದೇ ಮೀಸಲಾದ ಕಟ್ಟಿಂಗ್ ಶಾಪ್‌ಗಳೇ ಇರದ ಕಾಲ ಅದು. ಸಲೂನ್ ಇರಲಿ, ಕಟ್ಟಿಂಗಿಗೆ, ಶೇವಿಂಗಿಗೆ ಇಂತಿಷ್ಟು ಅಂತ ರೇಟ್ ಕೂಡ ಫಿಕ್ಸ್ ಆಗಿರಲಿಲ್ಲ! ಮಾಡಿದ ಕಾಯಕಕ್ಕೆ ಕ್ಷೌರಿಕನಿಗೆ ದೊರೆಯುತ್ತಿದ್ದದ್ದು ದುಡ್ಡಲ್ಲ, ಪ್ರತಿಯಾಗಿ ಹಳ್ಳಿಯ ಪ್ರತಿ ಮನೆಯವರೂ, ಬೆಳೆದ ಬೆಳೆಯಲ್ಲಿ ವರ್ಷಕ್ಕೆ ಇಂತಿಷ್ಟು ಖಂಡಗ ಭತ್ತ ನೀಡುವ ಚಾಲ್ತಿಯಿದ್ದ ವರ್ತನೆ ಪದ್ಧತಿ. ಈ ವರ್ತನೆಯಲ್ಲೇ ಕ್ಷೌರಿಕ ವರ್ಷವಿಡೀ ಕುಟುಂಬ ನಿಭಾಯಿಸಬೇಕಾಗುತ್ತಿತ್ತು! ಕರೆದವರ ಮನೆಗೆ ಹೋಗಿ, ಮನೆ ಮಂದಿಗೆ ಮತ್ತು ದಾರಿಯಲ್ಲಿ ಅಚಾನಕ್ ಆಗಿ ಎದುರಾದವರ ಅಪ್ಪಣೆ ಮೇರೆಗೆ ಹಲಸು, ಮಾವು. ಆಲ, ಸಿಕ್ಕ ಮರದ ನೆರಳಲ್ಲಿ ಕುಳಿತು ಕ್ಷೌರ ಮಾಡುತ್ತಿದ್ದ. ಮೊದಮೊದಲು ಮಡಚಿದ ಬಟ್ಟೆಯಲ್ಲಿ, ಆಮೇಲೆ ಚರ್ಮದ ಹಡಪದಲ್ಲಿ ಹಣಿಗೆ, ಕತ್ತರಿ. ಕೂಪು (ರೇಜರ್) ಮಸೆಕಲ್ಲು. ಪಾದರಸ ಉದರಿದ ಒಡಕಲ ಕನ್ನಡಿ, ಸೋಪು, ನಗ್ಗುನಗ್ಗಾದ ಸಿಲಾವರ ಬಟ್ಲು ಇಟ್ಟುಕೊಂಡು ಹಳ್ಳಿಹಳ್ಳಿ ಅಲೆಯುತ್ತಿದ್ದ ತಮ್ಮು, ವೃತ್ತಿಯಲ್ಲಿ ಸುಧಾರಣೆ ಕಂಡಿಲ್ಲವೆಂದಲ್ಲ; ಕ್ರಮೇಣ ಹಿತ್ತಾಳೆ ಪೆಟ್ಟಿಗೆಗೆ ಬಡ್ತಿ ಪಡೆದಿದ್ದ!

ಯಾರಾದರೂ ಸತ್ತರೆ ಮನೆಯವರ, ಸಂಸ್ಕಾರಕ್ಕೆ ಬರುವ ಬಂಧುಬಳಗದರಿಗೆಲ್ಲಾ ತಮ್ಮು, ಪುಕ್ಕಟೆಯಾಗಿ ಕ್ಷೌರ ಮಾಡಬೇಕಿತ್ತು. ಅಷ್ಟೇಅಲ್ಲ, ಸತ್ತ ಒಡೆಯನಿಗೆ ಒಕ್ಕಲು ಮಕ್ಕಳೆಲ್ಲಾ "ಮುಡಿ ಕೊಡುವ" ಗೌರವ ಸಂಪ್ರದಾಯ. ಚಿಕ್ಕಕಾಸು ಪಡೆಯದೇ ಚಾಚು ತಪ್ಪದೇ ಆ ಸಂಪ್ರದಾಯವನ್ನೂ ನೆರವೇರಿಸಿ ಕೊಡುವುದು ತಮ್ಮುನ (ನಾಪಿತನ) ಆದ್ಯ ಕರ್ತವ್ಯ.

ಕ್ಷೌರವೆಂದರೆ ಬರೀ ಚೌರ ಮಾಡುವುದು ಎನ್ನುತ್ತೀರಾ? ಖಂಡಿತಾ ಅಲ್ಲ. ಮಲೆನಾಡಿಗರ ಡಿಕ್ಷನರಿಯಲ್ಲಿ ಅದರ ಅರ್ಥವೇ ಬೇರೆ! ಬಹು ವಿಸ್ತಾರ! ಬಲು ದುಸ್ತರ!! ತಲೆ ಕ್ಷೌರವಾದ ಬಳಿಕ ಗಡ್ಡಮೀಸೆ ಹೆರೀಬೇಕು. ಆ ಮೇಲೆ ಹುಬ್ಬು, ಕಿವಿ ಕೂದಲು ಟ್ರಿಂ ಮಾಡಬೇಕು. ಅಷ್ಟೇ ಸಾಲದು, ಬಗಲ ಕೂದಲು ತೆಗೀಬೇಕು. ಸಾಹುಕಾರರ ಕೈಕಾಲು ಬೆರಳ ಉಗರನ್ನೂ ನೀಟಾಗಿ ಕತ್ತರಿಸಬೇಕು! ಎಲ್ಲಾ ಮುಗಿದ ಮೇಲೆ ಕೆಲವರು ಹೆಗಲ ಮೇಲಿನ ಟವಲ್ ಬಾಯಿಗೆ ಅಡ್ಡ ಹಿಡಿದು, ಪಿಸುಗುಟ್ಟಿ, "ಮಡಿಕೂಪ್ ಮಡಗಿಯಾ?" ಕೇಳಿಕೊಂಡು ಕಾಡಿನ ಬದಿ ಮಟ್ಟು, ಪೊದೆ ಹಿಂದೆ ಮರೆಯಾಗಿ ಸ್ವಲ್ಪ ಹೊತ್ತಿನ ನಂತರ ಮರಳಿ ತಂದು ಕೊಡುತ್ತಿದ್ದರು.

"ಕ್ಲೀನಾಗಿ ತೊಳೆದಿದ್ದೀರಾ?" ತಮ್ಮುನ ಪ್ರಶ್ನೆ.

"ಹೇಗೆ ಹೊಳೀತಿದೆ ನೋಡು..." ಗಿರಾಕಿ ಉತ್ತರ.

ಈ ಮಡಿಕೂಪಿನ ಚಿದಂಬರ ರಹಸ್ಯ ಅರಿಯದೇ, ಕುತೂಹಲ ತಡೆಯಲಾರದೇ ಒಮ್ಮೆ ತಮ್ಮುನ ಕೇಳಿದೆ:

"ಅದನ್ನ ತಗಂಡು ಅವರು ಕಾಡಿಗೆ ಯಾಕೆ ಹೋಗ್ತಾರೆ?"

"ಮರ ಸವರಲು..."

"ಅಷ್ಟು ಸಣ್ಣ ಕತ್ತಿಲ್ಲೀ ದೊಡ್ಡದೊಡ್ಡಮರಾ ಸವರಕಾಗುತ್ತಾ?"

"ದೊಡ್ಡಮರಾನ್ನಲ್ಲ, ಸಣ್ಣಸಣ್ಣ ಪೊದೆಗಳನ್ನ..."

"ದೊಡ್ಡ ಕಾಡಿನಲ್ಲಿ ಸಣ್ಣಸಣ್ಣ ಪೊದೆಗಳಿರ್‍ತಾವಾ?"

"ಏಯ್ ಸುಮ್ಮಿನಿರ್‍ತೀರಾ ಅಯ್ಯಾ.. ನೀವೀನ್ನೂ ಬಾಳಾ ಸಣ್ಣವರು, ದೊಡ್ಡವರಾಗಿ ಗಡ್ಡಮೀಸೆ ಬಂದ್ಮೇಲೆ ಅದೆಲ್ಲಾ ಗೊತ್ತಾಗುತ್ತೆ..." ರೇಗಿ ತಮ್ಮು ಬಾಯಿ ಮುಚ್ಚಿಸಿದ್ದ!

ಕ್ಷೌರ ಮಾಡಿಸಿಕೊಂಡವರು ಸೀದಾ ಮನೆಯೊಳಗೆ ಹೋಗುವ ಹಾಗಿರಲಿಲ್ಲ! ತಾಮ್ರದ ಚೊಂಬೊಂದರ ನೀರಲ್ಲಿ ತುಳುಸಿ ಬುಡದ ಮಣ್ಣು, ಗೋಮೂತ್ರ ಹಾಗೂ ದನದ ಸಗಣಿ ಕದಡಿದ